## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ನಾನು ತಲೆಯಾಡಿಸ್ತಾ ಹೋದೆ. ಅವ್ರು ಮುಂದುವರಿಸ್ತಾ ಹೋದ್ಲು. ನಮ್ಮ ಜಿಲ್ಲೆ ದಕ್ಷಿಣ ಕನ್ನಡದ ಜನ ಬೇರೆ ಊರಿಗೆ ಹೋದ್ರೆ ಒಂದಾಗುವುದೇ ನಮ್ಮ ತುಳು ಭಾಷೆಯಿಂದ ಅಲ್ವನಾ? ಪರಿಚಯವೇ ಇಲ್ಲದವರೂ ತುಳುವರು ಎಂದು ಗೊತ್ತಾದ ಕೂಡ್ಲೇ, 'ಈರ್ ಊರುದಾರ? ವಣಸಾಂಡ, ದಾದ ಮಲ್ಪುವಾರ್?' (ನೀವು ಊರಿನವರಾ, ಊಟ ಆಯ್ತಾ? ಏನು ಮಾಡ್ತ ಇದ್ದೀರಾ), ಕನ್ನಡದವರೇ ಆಗಿದ್ರೂ ಭಾಷೆ ತುಳು ಕಡೆ ತಿರ್ಗ್‌ತದೆ. ಎಲ್ಲ ಬೇಗ ಒಂದಾಗ್ತೇವೆ. ಇದಲ್ವಾ ಭಾಷೆಯ ಶಕ್ತಿ ಅಂದ್ರೆ?

ನಿಂಗೆ ಇನ್ನೊಂದು ವಿಷ್ಯ ಗೊತ್ತುಂಟಾ? 'ತುಳುನಾಡಿನ ಜನ್ರ ಭಾಷೆಯ ಉಚ್ಚಾರಣೆ ತುಂಬ ಚಂದ. ಇಲ್ಲಿಯವರು ಜಿಲ್ಲೆ ಬಿಟ್ಟು ಹೊರಗೆಲ್ಲಾದರೂ ಮಾತನಾಡಿದರೆ ತಕ್ಷಣ ಬೇರೆಯವರು ಗುರುತಿಸ್ತಾರೆ. 'ನೀವು ದಕ್ಷಿಣ ಕನ್ನಡದವರಾ?' ಅಂತ ಕೇಳ್ತಾರೆ ಅಂದ್ಲು. ಅವ್ರ ಮಾತಿಗೆ ನಾನು ನನ್ನ ಅನುಭವ ಒಂದನ್ನು ಸೇರಿಸ್ದೆ. ಈಗ ಕೇಳುವ ಸರದಿ ಅವ್ರದ್ದು ಆಯ್ತು. ನಾನಂದೆ, 'ನಾನು ಬೆಂಗಳೂರು ಬಂದು ಇಪ್ಪತ್ತೈದು ವರ್ಷ ಮೇಲೆ ಆದ್ರೂ, ಇನ್ನೂ ನನ್ನ ಮೂಲ ಭಾಷೆ ಎಲ್ಲೂ ಬದ್ಲಾಗಿಲ್ಲ. ಆಗ ನನ್ನ ಮಗ ತುಂಬ ಚಿಕ್ಕವನಿದ್ದ. ಹುಟ್ಟಿ ಎಂಟೋ ಹತ್ತೋ ತಿಂಗಳಾಗಿರಬೇಕು. ಬೆಂಗಳೂರಿನ ನನ್ನ ಮನೆಯಿಂದ ಗೆಳತಿ ಮನೆಯ ಸಣ್ಣ ಕಾರ್ಯಕ್ರಮವೊಂದಕ್ಕೆ ಹೋಗಲು ಬಿಎಂಟಿಸಿ ಬಸ್ ಹತ್ತಿದೆ. ತುಂಬ ರಷ್ ಇತ್ತು. ವಿಪರೀತ ಸೆಕೆ ಬೇರೆ. ಬಸ್ಸಲ್ಲಿ ಸೀಟು ಸಿಗ್ಲಿಲ್ಲ. ಮಗನನ್ನು ಎತ್ತಿಕೊಂಡೇ ನಿಂತಿದ್ದೆ. ಬಸ್ ಇಳಿಯಲು ಒಂದೆರಡು ಸ್ಟಾಪ್ ಇತ್ತು ಅಷ್ಟೆ. ಮಗ ಜೋರಾಗಿ ಕೂಗಲು (ಅಳು) ಶುರು ಮಾಡ್ದ. 'ಕೂಗೆಡ ಮಗಾ, ಬಸ್ಸು ಇಳಿವಲಾತು..' (ಅಳಬೇಡ ಮಗ, ಇನ್ನೇನು ಬಸ್ಸು ಇಳಿಯಲು ಆಯಿತು) ಅಂತ ಹೇಳ್ದೆ. ಇದನ್ನು ಕೇಳಿದ್ದೇ ತಡ ಮಾರಾಯ್ರೆ, ನನ್ನ ಪಕ್ಕದಲ್ಲಿ ನಿಂತಿದ್ದ ಒಂದು ಹುಡುಗಿ, 'ಮಗು ಎಂತಕ್ಕೆ ಇಷ್ಟು ಜೋರಾಗಿ ಕೂಗ್ತಿದೆ ಎಂದು ಸಾ ಕೇಳ್ದೆ 'ನೀವು ದಕ್ಷಿಣ ಕನ್ನಡದವರಾ?' ಅಂತ ಕೇಳ್ಬೇಕಾ? ಹಾಗಾದ್ರೆ ನೋಡ, ನಾವ್ ಬಾಯ್‌ಬಿಟ್ರೆ ದಕ್ಷಿಣ ಕನ್ನಡದವ್ರು ಅಂತ ಗೊತ್ತಾಗ್ತದಾ ಜನಕ್ಕೆ' ಅಂದೆ. ಅವ್ರು ಹೌದು ಹೌದು ಅಂತ ಹೇಳಿದ್ಲು.

ಮತ್ತೆ ಅವ್ರು 'ಈ ಮಂಗ್ಳೂರು ಕಡೇವ್ರು ಮಾತಾಡುವುದು 'ಗ್ರಾಂಥಿಕ ಭಾಷೆ' ಅಂತ ತಮಾಷೆ ಮಾಡ್ತಾರೆ. ಪುಸ್ತಕದಲ್ಲಿ ಹೇಗೆ ಉಂಟೋ ಹಾಗೇ ಇಲ್ಲಿನವ್ರ ಮಾತು ಕೂಡ ಅಂತ ಆಡಿಕೊಳ್ತಾರೆ. ನಮ್ಮ ತುಳುನಾಡಿನಲ್ಲಿ ಪ್ರಮುಖ ಆಡುಭಾಷೆ ತುಳುವಾದ್ರೂ ಶೈಕ್ಷಣಿಕವಾಗಿ ನಮ್ಮಲ್ಲಿ ಕನ್ನಡವೇ ಪ್ರಧಾನ ಅಲ್ವಾ? ಇದ್ರ ಒಟ್ಟಿಗೆ ಕೊಂಕಣಿ ಮತ್ತು ಬ್ಯಾರಿ, ಹವ್ಯಕ, ಕ್ರಿಶ್ಚಿಯನ್ ಭಾಷೆಗಳನ್ನೂ ಮಾತನಾಡುವ ಜನ ಇಲ್ಲಿದ್ದಾರಲ್ವಾ? ಭಾಷಾ ವೈವಿಧ್ಯಕ್ಕೆ ಹೇಳಿ ಮಾಡಿಸಿದ ಜಿಲ್ಲೆ ನಮ್ದು. ಇದು ನಮ್ಮ ದಕ್ಷಿಣ ಕನ್ನಡದ ಗುಣ, ಇಲ್ಲಿಯ ಸಂಸ್ಕೃತಿ, ಕಲೆ, ಶಿಕ್ಷಣ ವ್ಯವಸ್ಥೆ ಎಲ್ಲವೂ ಚಂದ' ಅಂದ್ಲು.

ಅವ್ರು ಭಾಷೆ ಬಗ್ಗೆ ಮಾತಾಡ್ತಾ ಹೋದ್ರೆ ನಾನು ಕಲೆ ಬಗ್ಗೆ ಮಾತು ತಿರ್ಗಿಸಿದೆ. ನಮ್ ಜಿಲ್ಲೆಯ ಕಲೆ ಬೇರೆ ಜಿಲ್ಲೆ, ರಾಜ್ಯ, ದೇಶವನ್ನೂ ದಾಟಿ ವಿದೇಶಕ್ಕೂ ಹೋಗಿದೆ ಅಲ್ವ ಮಾರಾಯ್ತಿ ಅಂದೆ. ಅವ್ರಿಗೆ ಖುಶಿ ಆಗಿರ್ಬೇಕು. ಕಲೆ ಬಗ್ಗೆ ನೀನ್ ಚಂದ ಮಾತಾಡ್ತಿ, ಸ್ವಲ್ಪ ವಿವರ್ಸಿ ಹೇಳಾ, ನಾನೂ ಕೇಳ್ತೇನೆ, ಎಲ್ಲಗ್ರೂ ಗೊತ್ತಾಗ್ಲಿ ಎಂದ್ಲು. ಆಗ ನಾನಂದೆ, 'ನೋಡಾ, ನಮ್ ಜಿಲ್ಲೆ ವಿವಿಧ ಕಲೆಗಳ ನೆಲೆವೀಡು. ಜಾನಪದ ಸೊಗಡಿನ ಪಾಡ್ದನ, ನಾಟ್ಯ, ಹಾವಭಾವ, ಅಭಿನಯ, ಲಯ, ಗಾನವನ್ನೊಳಗೊಂಡ ಯಕ್ಷಗಾನ, ಭರತನಾಟ್ಯದ ವೈಭವ, ಕರ್ನಾಟಕ ಶಾಸ್ತ್ರೀಯ ಸಂಗೀತದ ಮಧುರತೆ, ಗ್ರಾಮೀಣ ಸಂಸ್ಕೃತಿ ಬಿಂಬಿಸುವ ಕಂಬಳ, ಮನಸ್ಸಿಗೆ ನೆಮ್ಮದಿ ನೀಡುವ ಪುಣ್ಯಕ್ಷೇತ್ರಗಳು, ದೈವಾರಾಧನೆ ಮತ್ತು ಭೂತಕೋಲದಂತಹ ಆಚರಣೆ... ಎಲ್ಲವೂ ವೈವಿಧ್ಯಮಯವೇ, ಇಂತಹ ಸಾಂಸ್ಕೃತಿಕ ನೆಲೆಗಟ್ಟಿನ ಕಲೆಯಾಗಲಿ, ಆಚರಣೆಯಾಗಲಿ ಬೇರೆ ಯಾವ ಜಿಲ್ಲೆ, ರಾಜ್ಯ, ದೇಶಗಳಿಗೆ ಹೋದರೂ ಕಾಣಸಿಗದಷ್ಟು ವಿಭಿನ್ನವಾಗಿದೆ ಅಂದೆ. ಯಕ್ಷಗಾನ, ಆಟ ಎಂದ ಕೂಡ್ಲೇ ಅವಳ ಕಿವಿ ಕುತ್ತ (ನೆಟ್ಟಗೆ) ಆಯ್ತು. ಆಟದ ಬಗ್ಗೆ ಇನ್ನೊಂಚೂರು ಹೇಳಾ ಅಂದ್ಲು.

ನಾನು, 'ನನ್ ತಮ್ಮ ಸುಬ್ರಹ್ಮಣ್ಯ ಭಟ್ಟ ಫೋನ್ ಮಾಡಿದ್ದ, ಅವ್ನ ಕಾಲೇಜ್‌ನಲ್ಲಿ (ಎಸ್‌ಡಿಎಂ ತಾಂತ್ರಿಕ ಕಾಲೇಜು ಉಜಿರೆ) ಸಾಂಸ್ಕೃತಿಕ ಕಾರ್ಯಕ್ರಮ ಉಂಟಂತೆ. ಅಕ್ಕ ನೀನು ಬಾ, ಆನು ಯಕ್ಷಗಾನ ಆಡಿಸ್ತಾ ಇದ್ದೆ, ಮಕ್ಕಳತ್ರೆ. ಸುದರ್ಶನ ವಿಜಯ ಪ್ರಸಂಗ. ಭಾರೀ ಲಾಯಕಿದ್ದು' (ಚೆನ್ನಾಗಿದೆ) ಅಂದಿದ್ದ ಅಂದೆ. ನಿನ್ ತಮ್ಮ ಈಗ ಏನ್ ಮಾಡ್ತಾನೆ ಅಂದ್ಲು. ನಾನಂದೆ, ಅವ್ನು ಉಜಿರೆ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜ್‌ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಮಾರಾಯ್ತಿ. ಅವ್ನಿಗೆ ಚಿಕ್ಕವನಿರುವಾಗ್ಲೇ ಯಕ್ಷಗಾನ–ತಾಳಮದ್ದಲೆ ಅಂದ್ರೆ ಜೀವ. ತುಂಬ ಆಟಗಳಲ್ಲಿ ಅವ್ನು ಅರ್ಥ



ದಕ್ಷಿಣ ಕನ್ನಡದ ಪ್ರಸಿದ್ಧ ಕಂಬಳ